## Karunaduexams.com Mock Test-2 FDA/SDA GENERAL KANNADA

**ಸೂಚನೆ:– ಖಾಲಿ ಬಿಟ್ಟಿರುವ ಜಾಗಕ್ಕೆ ಸರಿಯಾದ ಉತ್ತರವನ್ನು ಗುರುತಿಸಿ.**

1. ತುಟಿಗಳ ಸಹಾಯದಿಂದ ಉತ್ಪತ್ತಿಯಾಗುವ ವರ್ಣಗಳನ್ನು ______ ಎಂದು ಕರೆಯಾಲಾಗುತ್ತದೆ.
   1. ಕಂಠ್ಯ 2. ತಾಲವ್ಯ 3. ಮೂರ್ಧನ್ಯ 4. <u>ಓಷ್ಠ್ಯ</u>

2. 'ಅಕ್ಕ ಕೇಳವ್ವ ನಾನೊಂದ ಕನಸು ಕಂಡೆ'. ಇಲ್ಲಿ 'ಕಂಡೆ' ಎಂಬುದು _____ ಕಾಲ
   1. <u>ಭೂತ</u> 2. ಭವಿಷ್ಯತ್ 3. ವರ್ತಮಾನ 4. ಪೂರ್ಣವರ್ತಮಾನ

3. 'ಹೊಸ ವರುಷ ತರಲಿ ಹೊಸ ಹರುಸ' ಇಲ್ಲಿ 'ತರಲಿ' ಎಂಬುದು _____ ಪದ.
   1. ನಿಷೇದಾರ್ಥಕ 2. <u>ವಿದ್ಯರ್ಥಕ</u> 3. ಸಂಭವನಾರ್ಥಕ 4. ಸಂಬಂದಾರ್ಥಕ

4. 'ರಾಷ್ಟ್ರರಕ್ಷಣೆ' ಎಂಬ ಪದವನ್ನು ಬಿಡಿಸಿ ಬರೆದಾಗ ಆಗುವ ರೂಪ _____
   1. ರಾಷ್ಟ್ರ+ರಕ್ಷಣೆ 2. ರಾಷ್ಟ್ರದಲ್ಲಿ+ರಕ್ಷಣೆ 3. <u>ರಾಷ್ಟ್ರದ+ರಕ್ಷಣೆ</u> 4. ರಾಷ್ಟ್ರದಿಂದ+ರಕ್ಷಣೆ

5. ಓದು ಇದರ ಕರ್ಮಣಿ ರೂಪ
   1. ಓದಿದನು 2. <u>ಓದಲ್ಪಟ್ಟಿತು</u> 3. ಓದಿಕೋ 4. ಓದನು

6. ನಾಮಪದಗಳ ಸ್ಥಾನದಲ್ಲಿ ಅವುಗಳ ಬದಲಾಗಿ ಬಳಸುವ ಶಬ್ಧಗಳೇ
   1. <u>ಸರ್ವನಾಮ</u> 2.ರೂಢನಾಮ 3.ಅಂಕಿತನಾಮ 4.ಅನ್ವರ್ಥನಾಮ

7. 'ತಾಯ ಬಾರ ಮೊಗವ ತೋರ ಕನ್ನಡಿಗರ ಮಾತೆಯ'____ ಇಲ್ಲಿ 'ಕನ್ನಡಿಗ' ಎಂಬುದು
   1. ಪ್ರತ್ಯಯ 2. ತದ್ಧಿತಾಂತ ಭಾವನಾಮ 3. ತದ್ಧಿತಾಂತಾವ್ಯಯ 4. <u>ತದ್ಧಿತಾಂತ ನಾಮ</u>

8. 'ದೇಹವೇ ದೇಗುಲ' ಇಲ್ಲಿರುವ ಅಲಂಕಾರ
   1. ಉಪಮಾಲಂಕಾರ 2.ಶಬ್ಧಾಲಂಕಾರ 3. <u>ರೂಪಕಾಲಂಕಾರ</u> 4.ಶ್ಲೇಷಾಲಂಕಾರ

9. 'ಲೋಕೈಕ' ಪದವು _____ ಸಂಧಿಗೆ ಉದಾಹರಣೆ
   1. <u>ವೃದ್ಧಿಸಂಧಿ</u> 2. ಅನುನಾಸಿಕ ಸಂಧಿ 3. ಗುಣಸಂಧಿ 4. ಯಣ್ ಸಂಧಿ

10. 'ಪುಸ್ತಕವನ್ನು' ಈ ನಾಮಪದದ ವಿಭಕ್ತಿ
    1. ಪ್ರಥಮ 2. <u>ದ್ವಿತೀಯ</u> 3. ತೃತೀಯ 4. ಚತುರ್ಥಿ

11. ಇವುಗಳಲ್ಲಿ ಯಾವುದು ಪ್ರಥಮ ಪುರುಷ ಸರ್ವನಾಮ ಅಲ್ಲ.
    1. ಅದು 2. ಅವರು 3. <u>ನಾನು</u> 4. ಅವಳು

12. 'ಅಮೃತ' ಪದದ ತದ್ಭವ ರೂಪ
    1. <u>ಅಮರ್ದು</u> 2.ಮೃತ 3.ಆಕೃತ 4.ಆವೃತ

13. ಮಹಾರಾಜರು <u>ಬಿಳಿಯ</u> ಆನೆಯ ಮೇಲೆ ಸವಾರಿ ಹೊರಟರು ಇಲ್ಲಿ ಗೆರೆ ಎಳೆದಿರುವ ಪದವನ್ನು ಹೀಗೆನ್ನುವರು.
    1. ಪರಿಮಾಣವಾಚಕ 2. ಸಂಖ್ಯಾವಾಚಕ 3. ಪ್ರಕಾರವಾಚಕ 4. <u>ಗುಣವಾಚಕ</u>

14. ನ, ಜ, ಭ, ಜ, ಜ, ಜ, ರ ಗುಣಗಳು ಬರುವ ವೃತ್ತ
    1. ಉತ್ಪಲಮಾಲೆ 2. <u>ಚಂಪಕಮಾಲೆ</u> 3. ಸ್ರಗ್ಧರಾ 4. ಮಹಾಸ್ರಗ್ಧರಾ

15. 'ಒಗ್ಗಟ್ಟು' ಪದವು ಈ ಸಂಧಿಗೆ ಉದಾಹರಣೆ
    1. ತತ್ಪುರುಷ 2. ಕರ್ಮಧಾರಯ 3. <u>ದ್ವಿಗುಸಮಾಸ</u> 4. ದ್ವಂದ್ವಸಮಾಸ

16. 'ಕಾರವಾರದಲ್ಲಿ ಮಲೇರಿಯಾ ವ್ಯಾಪಕವಾಗಿ ಹಬ್ಬಿತ್ತು'. ____ ಈ ವಾಕ್ಯವು

1. ಸಾಮಾನ್ಯವಾಕ್ಯ  2. ಸಂಯೋಜಿತವಾಕ್ಯ  3. ಮಿಶ್ರವಾಕ್ಯ  4. ನಿಷೇದಾರ್ಥಕವಾಕ್ಯ

17. ಗಾಂಧೀಜಿಯವರು ಮಾಡು ಇಲ್ಲವೇ ಮಡಿ ಎಂದು ಹೇಳಿದರು. ಈ ವಾಕ್ಯದಲ್ಲಿ ಬಳಸಬೇಕಾದ ಲೇಖನ ಚಿಹ್ನೆ
1. ಪ್ರಶ್ನಾರ್ಥಕ  2. ಅಲ್ಪವಿರಾಮ  3. ಉದ್ಧರಣ  4. ವಿವರಣಾತ್ಮಕ

18. ಇಲ್ಲಿರುವ ದ್ವಿರುಕ್ತಿ ಪದ ____
1. ದಬದಬ  2. ಪಟಪಟ  3. ಪಳಪಳ  4. ಮೆಲ್ಲಮೆಲ್ಲನೆ

19. 'ಮನೆ–ಮಠ' ಇದು _____ ವ್ಯಾಕರಣಾಂಶ.
1. ದ್ವಿರುಕ್ತಿ  2. ಅನುಕರಣಾವ್ಯಯ  3. ಜೋಡಿಪದ  4. ನುಡಿಗಟ್ಟು

20. ಕನ್ನಡ ವರ್ಣಮಾಲೆಯ ವರ್ಗೀಯ ವ್ಯಂಜನದ ಎರಡನೇ ಮತ್ತು ನಾಲ್ಕನೇ ಸಾಲಿನ ಅಕ್ಷರವನ್ನು ಹೀಗೆನ್ನುವರು.
1. ಅಲ್ಪಪ್ರಾಣ  2. ಮಹಾಪ್ರಾಣ  3. ಅನುನಾಸಿಕ  4. ಯೋಗವಾಹಕ

21. ಗುರು–ಲಘು ನಡುವಿರೆ
1. ಮನ–ಗಣ  2. ಭಯ–ಗಣ  3. ಜರ–ಗಣ  4. ಸತ–ಗಣ

22. ಇದು ಭವಿಷ್ಯತ್ ಕಾಲದ ವಾಕ್ಯ
1. ಮಕ್ಕಳು ಶಾಲೆಗೆ ಹೋದರು.  2. ಮಕ್ಕಳು ಶಾಲೆಗೆ ಹೋಗುವರು.
3. ಮಕ್ಕಳು ಶಾಲೆಗೆ ಹೋಗುತ್ತಿದ್ದಾರೆ.  4. ಮಕ್ಕಳು ಶಾಲೆಗೆ ಹೋಗರು.

23. 'ಬಾಳು'ಎಂಬುದು
1. ಸಕರ್ಮಕ ಕ್ರಿಯಾಪದ  2. ಅಕರ್ಮಕ ಕ್ರಿಯಾಪದ  3. ಕರ್ತೃ ಪದ  4. ಕರ್ಮಪದ

24. ಕ್ರಿಯಾಪದದ ಮೂಲ ರೂಪವನ್ನು _____ ಎನ್ನುವರು.
1. ಧಾತು  2. ನಾಮಪ್ರಕೃತಿ  3. ಪ್ರತ್ಯಯ  4. ಅವ್ಯಯ

25. 'ಮಗು' ಇದರ ಬಹುವಚನ ರೂಪ
1. ಮಗುಗಳು  2. ಮಕ್ಕಳು  3.ಮಗಂದಿರು  4. ಮಗು

**ಸೂಚನೆ:– ಕೆಳಗಿನ ಪ್ರಶ್ನೆಗಳು (ಪ್ರಶ್ನೆಸಂಖ್ಯೆ 26–29) ಕನ್ನಡ ಮೂಲದ್ದು ಅಲ್ಲದ (ಅನ್ಯಭಾಷೆಯಿಂದ ಸ್ವೀಕೃತ) ಶಬ್ಧವನ್ನು ಗುರುತಿಸಿ.**

26. 1. ಹಾಲು  2. ಮೊಸರು  3. ಬೆಣ್ಣೆ  4. ಘೃತ

27. 1. ನೆಲ  2. ಹೊಲ  3. ನುಚ್ಚು  4. ಜಮೀನು

28. 1. ಮನೆ  2. ಅನಾನಸು  3. ಮರ  4. ಅಕ್ಕಿ

29. 1. ಸುಮ್ಮನೆ  2. ಮೆಲ್ಲನೆ  3. ತಾರೀಖು  4. ತಿಳುವಳಿಕೆ

**ಸೂಚನೆ:– ಕೆಳಗಿನ ವಾಕ್ಯಗಳಲ್ಲಿ (ಪ್ರಶ್ನೆಸಂಖ್ಯೆ 30–32) ದೋಷವಿದ್ದರೆ ಅದನ್ನು ಸರಿಪಡಿಸಲು ಮುಂದೆ ಕೊಟ್ಟಿರುವ ಪರ್ಯಾಯ ರೂಪಗಳಲ್ಲಿ ಸೂಕ್ತವಾದುದನ್ನು ಗುರುತಿಸಿ. ದೋಷವಿಲ್ಲದಿದ್ದರೆ ಸುಧಾರಣೆ ಬೇಕಿಲ್ಲ ಆಗ (4)ನ್ನು ಗುರುತಿಸಿ.**

30. ಕೃಷ್ಣರಾಜಸಾಗರದ ನಿರ್ಮಾತ್ರು ಸರ್.ಎಂ.ವಿಶ್ವೇಶ್ವರಯ್ಯ.
1. ನಿಮಾರ್ತ್ರ  2. ನಿಮಾರ್ತೃ  3. ನಿರ್ಮಾತೃ  4. ಸುಧಾರಣೆ ಭೇಕಿಲ್ಲ

31. ಜಯರಾಮನು ಬಹಳ ಕಷ್ಟಪಟ್ಟು ವಿದ್ಯಾರ್ಜನೆ ಮಾಡಿದನು.
1. ವಿಧ್ಯಾರ್ಜನೆ  2. ವಿದ್ಯರ್ಜನೆ  3. ವಿದ್ಯಾರ್ಯ್ಜನೆ  4. ಸುಧಾರಣೆ ಭೇಕಿಲ್ಲ

32. ಕೀರ್ತಕಾರರಲ್ಲಿ ಕನಕದಾಸರಿಗೆ ಅಘ್ರಸ್ಥಾನವಿದೆ.

1. ಅಫ್ರಸ್ಥಾನ 2.<u>ಅಗ್ರಸ್ಥಾನ</u> 3.ಅರ್ಗಸ್ಥಾನ 4. ಸುಧಾರಣೆ ಬೇಕಿಲ್ಲ

**ಸೂಚನೆ:– ಕೆಳಗಿನವುಗಳಲ್ಲಿ (ಪ್ರಶ್ನೆಸಂಖ್ಯೆ 33–37) ಗೆರೆಹಾಕಿದ ಭಾಗಗಳು ತಪ್ಪಾಗಿದೆ. ಅವುಗಳ ಮುಂದೆ ಕೊಟ್ಟ ನಾಲ್ಕು ಪರ್ಯಾಯ ರಾಪಗಳಿಂದ ಸರಿಯಾದ ಉತ್ತರವನ್ನು ಗುರುತಿಸಿ.**

33. 'ಕಡಲತೀರದ ಭಾರ್ಗವ' ಎಂದು <u>ಕುವೆಂಪು</u>ರವರನ್ನು ಕರೆಯುತ್ತೇವೆ.
1. <u>ಶಿವರಾಮಕಾರಂತ</u> 2. ಬೇಂದ್ರೆ 3. ಮಾಸ್ತಿ 4. ತೇಜಸ್ವಿ

34. ಕನ್ನಡದ ಮೊಟ್ಟಮೊದಲು ಅಲಂಕಾರಿಕ ಗ್ರಂಥ <u>ಯಶೋಧರ ಚರಿತೆ</u>
1. ವಡ್ಡಾರಾಧನೆ 2. ಆದಿಪುರಾಣ 3. ಗದಾಯುದ್ಧ 4. <u>ಕವಿರಾಜಮಾರ್ಗ</u>

35. ನೆನಪಿನ ದೋಣಿಯಲ್ಲಿ ಇದು <u>ಪಿ.ಲಂಕೇಶರವರ</u> ಆತ್ಮಚರಿತ್ರೆ.
1. ಅರವಿಂದ ಮಾಲಗಿತ್ತಿ 2. <u>ಕುವೆಂಪು</u> 3. ದೇವನೂರು ಮಹಾದೇವ 4. ವಿ.ಕೃ.ಗೋಕಾಕ್

36. 'ಮಾತೆಂಬುದು ಜ್ಯೋತಿರ್ಲಿಂಗಂ' ಎಂಬುದು <u>ಗುಲ್ಬರ್ಗಾ</u> ವಿಶ್ವವಿದ್ಯಾಲಯದ ಧ್ಯೇಯ ವಾಕ್ಯ.
1. <u>ಕನ್ನಡ</u> 2. ಕುವೆಂಪು 3. ಕರ್ನಾಟಕ 4. ಮೈಸೂರು

37. 'ಕರ್ನಾಟಕ ಪ್ರಹಸನ ಪಿತಾಮಹ' ಎಂದು <u>ಶಾಂತಕವಿ</u> ಅವರನ್ನು ಕರೆಯಲಾಗಿದೆ.
1. ಶ್ರೀರಂಗ 2. ಸಂಸ 3. <u>ಟಿ.ಪಿ.ಕೈಲಾಸಂ</u> 4. ಪರ್ವತವಾಣಿ

**ಸೂಚನೆ:– ಈ ಕೆಳಗಿನವುಗಳಲ್ಲಿ (ಪ್ರಶ್ನೆಸಂಖ್ಯೆ 38–43) ಪದಗಳು ಕ್ರಮಬದ್ಧವಾಗಿಲ್ಲ. ಅರ್ಥಪೂರ್ಣವಾಗುಂತೆ ಗೆರೆ ಹಾಕಿ ಸೂಚಿಸಿದ ಭಾಗಗಳನ್ನು ಪುನಃ ಜೋಡಿಸಿ ಅವುಗಳ ಅನುಕ್ರಮವನ್ನು ಗುರ್ತಿಸಿ.**

38. <u>ನೂರು ಶಿಕ್ಷಕರಿಗೆ</u> <u>ಸುಶಿಕ್ಷಿತ ತಾಯಿಯು</u> <u>ಒಬ್ಬ</u> <u>ಸಮ.</u>
P Q R S
1.QRSP 2.RPSQ 3.<u>RQPS</u> 4.QSPR

39. <u>ಕನ್ನಡ ನಾಡಿನ ವಿಸ್ತಾರತೆಯನ್ನು</u> <u>ಬಹುವಾಗಿ</u> ಕ<u>ವಿರಾಜಮಾರ್ಗದಲ್ಲಿ</u> <u>ವರ್ಣಿಸಲಾಗಿದೆ</u>
P Q R S
1. <u>RPQS</u> 2. RQPS 3. PQSR 4. QPRS

40. <u>ಯಾವಾಗಲೂ</u> <u>ಹಿಂದಿನ ಅಕ್ಷರ</u> <u>ಗುರುವಾಗಿರುತ್ತದೆ</u> <u>ಒತ್ತಕ್ಷರದ</u>
P Q R S
1. QSPR 2. <u>SQPR</u> 3. RPQS 4. QPSR

41. <u>ಹತ್ತುದಿನಗಳಲ್ಲೇ</u> <u>ಜನ್ಮನೀಡಿದ</u> <u>ತೀರಿಕೊಂಡರು</u> <u>ಹೆಣ್ಣು ಶಿಶುವಿಗೆ</u>.
P Q R S
1. <u>SQPR</u> 2. SPQR 3. QSRP 4. PQSR

42. <u>ಕವನ ಸಂಗ್ರಹಕ್ಕೆ</u> <u>ತೆರೆದಬಾಗಿಲು</u> <u>ಲಭಿಸಿದೆ</u> <u>ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ</u>
P Q R S
1. PQSR 2. QPRS 3. <u>QPSR</u> 4. SRQP

43. <u>ಮೊದಲು ಪುಸ್ತಕ</u> <u>ಪ್ರಕಟಿಸಿದ</u> <u>ಕಾರಂತರು</u> <u>ರಾಷ್ಟ್ರಗೀತೆ ಸುಧಾರಕ</u>
P Q R S
1. RPSQ 2. SQPR 3. QRSP 4. <u>RQPS</u>

**ಸೂಚನೆ:– ಕೆಳಗಿನ ವಾಕ್ಯಗಳಲ್ಲಿ (ಪ್ರಶ್ನೆಸಂಖ್ಯೆ44–49) (1) (2) (3) ಎಂಬ ಭಾಗಗಳಿವೆ. ಈ ಯಾವುದೇ ಭಾಗದಲ್ಲಿ ವ್ಯಾಕರಣ, ಕಾಗುಣಿತ ಅಥವಾ ಚಿಹ್ನೆಗೆ ಸಂಬಂಧಿಸಿದ ದೋಷವಿದ್ದರೆ ಆ ಭಾಗವನ್ನು ಗುರ್ತಿಸಿ. ಯಾವ ಭಾಗದಲ್ಲೂ ದೋಷವಿಲ್ಲದ್ದಿದ್ದರೆ 'ತಪ್ಪಿಲ್ಲ' ಎಂಬ (4) ನೇ ಭಾಗವನ್ನು ಗುರ್ತಿಸಿ.**

44. ಹುಡುಗರು (1) ದನಗಳನ್ನು (2) ಹೊಡೆದುಕೊಂಡು ಬಂದರು. (3) ತಪ್ಪಿಲ್ಲ (4)

45. ಮಹಾಶೂರನಾದ ಶ್ರೀರಾಮಚಂದ್ರನು (1) ದುಶ್ಟನಾದ (2) ರಾವಣನನ್ನು ಕೊಂದನು. (3) ತಪ್ಪಿಲ್ಲ (4)

46. ಭಲೆ,ಭಲೆ, (1) ನಿನ್ನ ಕೆಲಸ (2) ಮೆಚ್ಚುವಂತದ್ದು (3) ತಪ್ಪಿಲ್ಲ (4)

47. ಮೂರ್ತಿರಾವ್ ರವರು (1) ವ್ಯಾಘ್ರಗೀತೆ ಎಂಬ ಪಾಠವನ್ನು (2) ಬರೆದ್ದಿದ್ದಾರೆ. (3) ತಪ್ಪಿಲ್ಲ (4)

48. ಜಾಗ್ರತದಳ (1) ಸಂಸ್ಥೆಯನ್ನು (2) ಸರ್ಕಾರ ನೇಮಿಸಿದೆ. (3) ತಪ್ಪಿಲ್ಲ (4)

49. ಬ್ರಹ್ಮನು (1) ಸಕಲಚರಾಚರಗಳ (2) ಸೃಷ್ಟಿಕರ್ತ. (3) ತಪ್ಪಿಲ್ಲ (4)

**ಸೂಚನೆ:– ಕೆಳಗಿನ ವಾಕ್ಯಗಳಲ್ಲಿ (ಪ್ರಶ್ನೆಸಂಖ್ಯೆ50–55) ಗೆರೆ ಎಳೆದ ಭಾಗದಲ್ಲಿ ಕೊಡಲಾದ ಇಂಗ್ಲೀಷ್ ರೂಪದ ಪರ್ಯಾಯವಾಗಿ ನಾಲ್ಕು ಕನ್ನಡ ರೂಪಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದುದನ್ನು ಗುರ್ತಿಸಿ.**

50. ಇತ್ತೀಚೆಗೆ ತಮಿಳುನಾಡಿನ ಮುಖ್ಯಮಂತ್ರಿ ಡಿಹೈಡ್ರೇಷನ್ ನಿಂದ ಮರಣ ಹೊಂದಿದರು.
    1. ನಿರ್ಜಲೀಕರಣ 2. ನೀರುಜಲಿಕರಣ 3. ಸುಜಲೀಕರಣ 4. ಮಾರ್ಜಲಿಕರಣ

51. ಕೆಲವರು ಕೆಲವರ ವಿಷಯದಲ್ಲಿ ಪ್ರಿಜ್ಯುಡೈಸ್ ಭಾವನೆಯನ್ನು ಹೊಂದಿರುತ್ತಾರೆ.
    1. ನ್ಯಾಯಯುತ 2. ಪೂರ್ವಾಗ್ರಹ ಪೀಡಿತ 3. ಅಸಮ್ಮತ 4. ವಿವೇಚನಾಯುತ

52. ಭಾರತೀಯ ಟ್ರೆಡೀಷನ್ ಇಂದಿಗೂ ಇತರ ದೇಶಗಳಿಗೂ ಮಾದರಿಯಾಗಿದೆ.
    1. ಸಂಸ್ಕೃತಿ 2. ರೀತಿ ನೀತಿ 3. ಸಂಪ್ರದಾಯ 4. ಆಚಾರ ವಿಚಾರ

53. ಅಧಿಕಾರಿಗಳು ಕೆಲವು ವಿಷಯಗಳನ್ನು ಕಾನ್ಫಿಡೆನ್ಷಿಯಲ್ ಆಗಿಡಬೇಕಾಗುತ್ತದೆ.
    1. ಮರೆಮಾಚಿ 2. ಗೌಪ್ಯದಿಂದ 3. ಎಲ್ಲರಿಗೂ ತಿಳಿಯುವ ಹಾಗೇ 4. ಅಮುಕ್ತವಾಗಿ

54. ಭಾರತವು 2ನೇ ಮಹಾಯುದ್ಧದ ಸಂದರ್ಭದಲ್ಲಿ ನ್ಯೂಟ್ರಲ್ ನೀತಿಯನ್ನು ಅನುಸರಿಸಿತು.
    1. ಹೊಂದಾಣಿಕೆ 2. ಮುಕ್ತ 3. ಸೇರುವಿಕೆ 4. ತಟಸ್ಥ

55. ವಿಶ್ವ ಸಂಸ್ಥೆಯ ಸೆಕ್ರೆಟರಿಯೇಟ್ ಎಂಬ ಆಂಗ್ಲ ಸಂಸ್ಥೆಯನ್ನು ಹೊಂದಿದೆ.
    1. ಭದ್ರತಾ ಕೊಠಡಿ 2. ಸಚಿವಾಲಯ 3. ಕಾರ್ಯದರ್ಶಿ ಕೊಠಡಿ 4. ಧರ್ಮ ಸಭೆ

**ಸೂಚನೆ:– ಈ ಕೆಳಗಿನ (ಪ್ರಶ್ನೆಸಂಖ್ಯೆ 56–58) PQRS ಎಂಬ ನಾಲ್ಕು ವಾಕ್ಯಗಳನ್ನು ಕೊಡಲಾಗಿದೆ. ಈ ವಾಕ್ಯಗಳು ಸ್ಥಾನಪಲ್ಲಟವಾಗಿವೆ. ಅವುಗಳನ್ನು ಅರ್ಥಪೂರ್ಣವಾಗಿ ಜೋಡಿಸುವ ಉತ್ತರವನ್ನು ಗುರ್ತಿಸಿ.**

56. P. ವಿವೇಕಾನಂದರು ಪ್ಯಾರಿಸ್‌ನಿಂದ ಗ್ರಾಮಕ್ಕೆ ಹೊರಟಾಗ ಅವರಿದ್ದ ಕುದುರೆ ಗಾಡಿಯ ಚಾಲಕ ಕೆಳಗಿಳಿದು ತನ್ನ ಮಕ್ಕಳನ್ನು ಮುದ್ದಾಡಿ ಮುಂದೆಸಾಗುತ್ತಾನೆ.

Q. ಈಗ ಸಂಸಾರ ಸಾಗಿಸಲು, ಸಾಲ ತೀರಿಸಲು ಚಾಲಕ ವೃತ್ತಿಯನ್ನು ಆರಂಭಿಸಿದ್ದ.

R. ಚಾಲಕನ ಪೂರ್ವಚರಿತ್ರೆ ಕೇಳಿ ವಿವೇಕಾನಂದರು ಈ ವ್ಯಕ್ತಿ ಒಬ್ಬ ವ್ಯಾವಹಾರಿಕ ಮೇಧಾವಿ ಎಂದು ಮೆಚ್ಚಿಕೊಂಡರು.

S. ಹಿಂದೆ ಮುಳುಗಿ ಹೋಗಿದ್ದ ಬ್ಯಾಂಕನ್ನು ಕಟ್ಟಿ ಮತ್ತೆ ಮಾಲೀಕನಾಗುವ ಆಸೆ ಚಾಲಕನಿಗಿತ್ತು.

1. PSQR 2.PQRS 3.SRQP 4.QSRP

57. P. ಕನ್ನಡ ಭಾಷೆಯ ಮೊದಲು ಉಪಲಬ್ಧ ಕೃತಿಯೆಂದರೆ ಕವಿರಾಜಮಾರ್ಗ.

Q. ಇದರ ಕಾಲ ಕ್ರಿ.ಶ.450. ಇದರ ಕರ್ತೃ ಶ್ರೀವಿಜಯ.

R. ಇದೊಂದು ಅಲಂಕಾರಿಕ ಗ್ರಂಥವಾಗಿದೆ.

S. ಇದರಲ್ಲಿ ಕನ್ನಡನಾಡಿನ ವಿಸ್ತಾರತೆಯನ್ನು ವರ್ಣಿಸಲಾಗಿದೆ.

1. RPQS 2.PQRS 3.QPRS 4.RSQP

58. P. ಮಾರ್ಗಮಧ್ಯದಲ್ಲಿ ತಂದೆ–ತಾಯಿಗಳಿಗೆ ದಾಹವಾಗಿದ್ದರಿಂದ ನೀರು ತರಲು ಹೋದನು.

Q. ಶಬ್ಧವೇದಿ ವಿದ್ಯೆಯಿಂದ ಬಾಣವನ್ನು ಬಿಟ್ಟಿದ್ದರಿಂದ ಶ್ರವಣಕುಮಾರನು ಹತನಾದನು.

R. ಶ್ರವಣಕುಮಾರನು ತಂದೆ–ತಾಯಿಯಗಳನ್ನು ಕರೆದುಕೊಂಡು ತೀರ್ಥಯಾತ್ರೆಗೆ ಹೋಗುತ್ತಿದ್ದನು.

S. ನೀರು ತುಂಬಿಸುತ್ತಿರುವ ಧ್ವನಿಯನ್ನು ಕೇಳಿ ದಶರಥನು ಕಾಡು ಪ್ರಾಣಿಯೆಂದೆ ಭಾವಿಸಿದನು.

1. RSPQ 2.PRSQ 3.QSRP 4.RSPQ

**ಸೂಚನೆ:– ಕೆಳಗಿನ ಪದಗಳಿಗೆ (ಪ್ರಸಂ 59–67) ಅವುಗಳ ಮುಂದೆ ಸೂಚಿಸಿದ ಪರ್ಯಾಯ ರಾಪಗಳಲ್ಲಿ ಸಮಾನಾರ್ಥಕವಾದ ಅಥವಾ ಅತೀ ಸಮೀಪದ ಅರ್ಥವುಳ್ಳ ರೂಪವನ್ನು ಗುರುತಿಸಿ.**

59. 'ಉಲೂಕ' ಎಂದರೆ

1. ನೀರು 2. ಗೂಬೆ 3. ಭೂಮಿ 4. ಹೊಟ್ಟೆ

60. 'ತಿಮಿರ' ಎಂದರೆ

1. ಕತ್ತಲೆ 2. ಬೆಳಕು 3. ಸಂಜೆ 4. ಕತ್ತರಿಸು

61. 'ಕಳವೆ' ಎಂದರೆ

1. ಹೂವು 2. ಕಳ್ಳತನ 3. ಭತ್ತ 4. ಕಿತ್ತಳೆ

62. 'ಅಂಘ್ರಿ' ಎಂದರೆ

1. ಹಸ್ತ 2. ಪಾದ 3. ಕರ್ಣ 4. ನಿಟಿಲು

63. 'ಇಕ್ಷು' ಎಂದರೆ

1. ಜೋಳ 2. ರಾಗಿ 3. ಹಲಸು 4. ಕಬ್ಬು

64. 'ಮುಕ್ತಕಂಠ' ಎಂದರೆ

1. ತೆರೆದಮನಸ್ಸು 2. ಒಳಮನಸ್ಸು 3. ಹೊರಮನಸ್ಸು 4. ಮಧುರಧ್ವನಿ

65. ತೃಣ' ಎಂದರೆ

1. ಮರ 2. ಗಿಡ 3. ಹುಲ್ಲು 4. ಹೂವು

66. 'ಎಲರ' ಎಂದರೆ

1. ಗಾಳಿ 2. ಎಲ್ಲರೂ 3. ಸ್ಥಳ 4. ದರ್ಪ

67. 'ನಾಕ' ಎಂದರೆ

1. ನರಕ 2. ನಾಲ್ಕು 3. ಸುಳ್ಳು 4. ಸ್ವರ್ಗ

**ಸೂಚನೆ:– ಕೆಳಗೆ ಕೊಟ್ಟಿರುವ (ಪ್ರಶ್ನೆ ಸಂಖ್ಯೆ 68–75) ವಿರುದ್ಧಾರ್ಥಕ ಪದಗಳನ್ನು ಮುಂದೆ ಕೊಟ್ಟಿರುವ ಪರ್ಯಾಯ ಗುರುತಿಸಿ.**

68. 'ವೃದ್ಧಿ'
   1. ಕ್ಷಯ  2. ಅಭಿವೃದ್ಧಿ  3. ನಿರಭಿವೃದ್ಧಿ  4. ಸುವೃದ್ಧಿ

69. 'ತ್ವರಿತ'
   1. ಬೇಗ  2. ಸಾವಕಾಶ  3. ಶೀಘ್ರ  4. ತಕ್ಷಣ

70. 'ವ್ಯರ್ಥ'
   1. ನಿರರ್ಥಕ  2. ನಿಷ್ಪ್ರಯೋಜಕ  3. ನಿರರ್ಥಕ  4. ಸಾರ್ಥಕ

71. 'ವಚನ'
   1. ನಿರ್ವಚನ  2. ಅವಚನ  3. ನಿರರ್ವಚನ  4. ಮಾತು

72. 'ಸಾತ್ವಿಕ'
   1. ಅಸಾತ್ವಿಕ  2. ತಾಮಸ  3. ಒಳ್ಳೆಯ  4. ಸುಗುಣ

73. 'ಕೋಮಲ'
   1. ಕಠಿಣ  2. ಸುಕೋಮಲ  3. ವಿಕೋಮಲ  4. ಪರಕೋಮಲ

74. 'ಅಸ್ತಮ'
   1. ಮುಳುಗು  2. ಉದಯ  3. ನಿಧನಹೊಂದು  4. ಕಾಯಿಲೆ

75. 'ಉತ್ತಮ'
   1. ಅತ್ಯುತ್ತಮ  2. ಸಾಧಾರಣ  3. ನಿರುತ್ತಮ  4. ಅಧಮ

**ಸೂಚನೆ: – ಈ ಕೆಳಗಿನ ಕೆಲವು ಕನ್ನಡ ನುಡಿಗಟ್ಟುಗಳನ್ನು (ಪ್ರಶ್ನೆ ಸಂಖ್ಯೆ 76–85) ಅವುಗಳ ಮುಂದೆ ನಾಲ್ಕು ಪರ್ಯಾಯ ರೂಪಗಳನ್ನು ನೀಡಿದೆ. ನುಡಿಗಟ್ಟಿನ ಅರ್ಥವನ್ನು ವಿವರಿಸುವ ರೂಪವನ್ನು ಗುರುತಿಸಿ.**

76. 'ಒರೆಗೆ ಹಚ್ಚು'
   1. ಗೋರಂಟಿ ಹಚ್ಚು  2. ಚೆನ್ನಾಗಿ ಪರೀಕ್ಷಿಸು  3. ಗಾಳಿಗೆ ಬಿಡು  4. ಸಿದ್ಧನಾಗು

77. 'ಕಬ್ಬಿಣದ ಕಡಲೆ'
   1. ಅತ್ಯಂತ ಕಠಿಣ ವಿಷಯ  2. ಅತ್ಯಂತ ಸುಲಭ ವಿಷಯ  3. ಸಂದಿಗ್ಧ ಪರಿಸ್ಥಿತಿ  4. ಬಹಳ ಗಟ್ಟಿ

78. 'ಹದ್ದಿನ ಕಣ್ಣು'
   1. ದೊಡ್ಡ ಕಣ್ಣು  2. ಕಾಣದ ಕಣ್ಣು  3. ತೀಕ್ಷ್ಣದೃಷ್ಟಿ  4. ದೂರದೃಷ್ಟಿ

79. ಕಿವಿಯಲ್ಲಿ ಗಾಳಿಯೂದು
   1. ಹತೋಟಿಯಲ್ಲಿಡು  2. ಹುರಿದುಂಬಿಸು  3. ಹೆಚ್ಚಿಸು  4. ಗಾಳಿ ಹಾಕು

80. ಬೆನ್ನಿಗೆ ಇರಿ
   1. ನಂಬಿಕೆ ದ್ರೋಹ ಮಾಡು  2. ಚೂರಿ ಹಾಕು  3. ನಿಷ್ಕರುಣೆ  4. ಕಠಿಣ ಮನಸ್ಸು

81. ಕಟ್ಟು ಕಥೆ
   1. ಕಥೆಯನ್ನು ಕಟ್ಟುವುದು  2. ಕಥೆ ಹೇಳು  3. ಸುಳ್ಳು ಸಂಗತಿ  4. ಸತ್ಯ ಸಂಗತಿ

82. ಒಗ್ಗರಣೆ ಹಾಕು
   1. ಯಾವುದನ್ನು ಉಳಿಸಿಕೊಳ್ಳದೇ ಆಡುವುದು  2. ಇದ್ದದ್ದನ್ನು ಇದ್ದ ಹಾಗೆ ಹೇಳುವುದು
   3. ಇರುವುದನ್ನು ಸಂಕ್ಷಿಪ್ತವಾಗಿ ಹೇಳು  4. ಇಲ್ಲದಿರುವುದನ್ನು ಬೆರೆಸಿ ಹೇಳು

83. ಏಳು ತಿಂಗಳಲ್ಲಿ ಹುಟ್ಟಿದವ
   1. ಅವಸರ ಪಡುವವ   2. ನಿಧಾನವಾಗಿ ಕೆಲಸ ಮಾಡುವವ
   3. ಬಹಳ ಅನುಭವಿ ಶಾಲಿ   4. ಏನೂ ತಿಳಿಯದವ

84. **'ತಣ್ಣೀರೆರಚು'**
   1. ನಷ್ಟವಾಗು   2. ಉತ್ಸಾಹ ಭಂಗ ಮಾಡು   3. ತಣ್ಣೀರನ್ನು ಹಾಕು   4. ತುಂಬಾ ಸಲಿಗೆ ಕೊಡು

85. ಕೈ ಬಿಸಿ ಮಾಡು
   1. ಮೋಸ ಮಾಡು   2. ಚಾಡಿ ಹೇಳು   3. ಲಂಚ ಕೊಡು   4. ಕೈಯಲ್ಲಿ ಬಿಸಿಯಾದ ವಸ್ತು ನೀಡು

**ಸೂಚನೆ:– ಈ ಕೆಳಗೆ ಕೊಟ್ಟ ಶಬ್ದಗಳಲ್ಲಿ (ಪ್ರಶ್ನೆ ಸಂಖ್ಯೆ 86–91) ಒಂದು ಪದ ಗುಂಪಿಗೆ ಸೇರುವುದಿಲ್ಲ. ಅಂತಹ ಪದವನ್ನು ಗುರುತಿಸಿ.**

86. 1. ದುಡಿತವೇ ನನ್ನ ದೇವರು 2. ನನಸಾಗದ ಕನಸು   3. ಹೋರಾಟದ ಬದುಕು   4. ಜ್ಞಾಪಕ ಚಿತ್ರಶಾಲೆ

87. 1. ವಾಣಿ   2. ಭಾರತಿ   3. ಮನುಜ   4. ಚನ್ನಮಲ್ಲಿಕಾರ್ಜುನ

88. 1. ಕುಸುಮ   2. ಭಾಮಿನಿ   3. ಯೋಗ   4. ಭೋಗ

89. 1. ಅಮರ್ದು   2. ಶಾಲೆ   3. ಬಿನ್ನಾಣ   4. ಗರ

90. 1. ಅಷ್ಟೈಶ್ವರ್ಯ   2. ಇತ್ಯಾದಿ   3. ಅತ್ಯಂತ   4. ಮನ್ವಂತರ

91. 1. ಕಾರ್ಮೋಡ   2. ಪೆರ್ಮರ   3. ಪ್ರಜಾಮಾತೆ   5. ಹೊಂಬಣ್ಣ

**ಸೂಚನೆ: – ಕೆಳಗಿನ ವಾಕ್ಯಗಳಲ್ಲಿ ಗೆರೆ ಹಾಕಿ ಸೂಚಿಸಿದ ಭಾಗ ತಪ್ಪಾಗಿದ್ದರೆ ಮುಂದೆ ಕೊಡಲಾದ ಮೂರು ಪರ್ಯಾಯರೂಪಗಳಲ್ಲಿ ಸರಿಯಾದ ರೂಪವನ್ನು ಗುರ್ತಿಸಿ, ತಪ್ಪಿಲ್ಲದಿದ್ದರೆ ತಪ್ಪಿಲ್ಲ (4) ನ್ನು ಗುರುತಿಸಿ. (ಪ್ರಶ್ನೆ ಸಂಖ್ಯೆ92–100)**

92. **'ರುಜುವಾತು'** ಇಲ್ಲದೆ ಯಾವ ಕಾರ್ಯ ಸಾಧನೆಯೂ ಆಗದು,
   1. ಋಜುವಾತು   2. ರುಜುವಾತು   3. ರೂಜುವಾತು   4. ತಪ್ಪಿಲ್ಲ

93. **'ಗಂಧರ್ವರೆಂದರೆ'** ದೇವತೆಗಳ ಒಂದು ವರ್ಗ
   1. ಗಾಂಧರ್ವ   2. ಗಂಧರ್ವ   3. ಘಂದರ್ವ   4. ತಪ್ಪಿಲ್ಲ

94. ಭಾರತವು **ಜಾತ್ಯಾತೀತ** ರಾಷ್ಟ್ರವಾಗಿದೆ.
   1. ಜಾತ್ಯತೀತ   2. ಜಾತ್ಯೀತ   3. ಜಾತ್ಯತಿತ   4. ತಪ್ಪಿಲ್ಲ

95. ಇಂಥದೊಂದು ಅವಸ್ಥೆ ಸಮಾಜ **ವ್ಯವಸ್ಥೆಯ** ಸೂಚಿಯಾಗಿದೆ.
   1. ವ್ಯವಸ್ತೆ   2. ವ್ಯವಾಸ್ಥೆ   3. ವವಸ್ಥೆ   4. ತಪ್ಪಿಲ್ಲ

96. ಆಸ್ಪತ್ರೆಯ **ಪಾರ್ಷ್ವ**ದಲ್ಲಿ ಶಾಲೆಯೊಂದು ಇದೆ.
   1. ಪಾರ್ಸ್ವದಲ್ಲಿ   2. ಪಾರ್ಶ್ವದಲ್ಲಿ   3. ಫಾರ್ಶ್ವದಲ್ಲಿ   4. ತಪ್ಪಿಲ್ಲ

97. ಪೋಗವ್ವಾ ನಿನ್ನ **ಅಭೀಷ್ಟ** ಸಿದ್ಧಿಗೆ.
   1. ಅಬಿಷ್ಠ   2. ಅಭೀಶ್ಟ   3. ಅಬೀಷ್ಠ   4. ತಪ್ಪಿಲ್ಲ

98. ವೇದಿಯಲ್ಲಿ **ಉದ್ಧೀಪ್ತವಾದ** ಅಗ್ನಿಯನ್ನು ಸುತ್ತುತ್ತಾಳೆ.
   1. ಉದ್ದೀಪ್ತ   2. ಉದ್ದೀಪ್ತ   3. ಉದ್ದೀಪ್ತ   4. ತಪ್ಪಿಲ್ಲ

99. ಬಸವಣ್ಣನವರಿಗೆ **ಜಗಜ್ಜ್ಯೋತಿ**ಎಂಬ ಬಿರುದು ಇದೆ.
   1. ಜಗಜ್ಯೋತಿ   2. ಜಗತಜೋತಿ   3. ಜಗಜ್ಯೋತಿ   4. ತಪ್ಪಿಲ್ಲ

100.ಗೊಮ್ಮಟವ್ಯಕ್ತಿತ್ವದ **ದಾರ್ಸನಿಕ** ನೇತಾರರಾಗಿ ಬೆಳೆದವರು ಸರ್ ಎಂ.ವಿಯವರು.

1. ದಾರ್ಷನಿಕ 2. ದರ್ಶನಿಕ 3. ದಾರ್ಶನಿಕ 4. ತಪ್ಪಿಲ್ಲ.